## ಶಿಕ್ಷಕರೇ ಗಮನಿಸಿ

# ತರಗತಿಗಳಲ್ಲಿ ಮೌಲ್ಯಶಿಕ್ಷಣ

ಇಂದಿನ ಮೂಲಭೂತ ಆವಶ್ಯಕತೆ ಎಂದರೆ ವಿದ್ಯಾರ್ಥಿಗಳಿಗೆ ನೈತಿಕ ಮೌಲ್ಯಗಳ ಬಗ್ಗೆ ಅರಿವು ಮೂಡಿಸುವುದು, ಹಾಗೆಯೇ ಅವುಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಅವರನ್ನು ಪ್ರೇರೇಪಿಸುವುದು. ಇದನ್ನು ಮಾಡುವಲ್ಲಿ ಶಿಕ್ಷಕರಾದ ತಮ್ಮ ಪಾತ್ರ ಅತ್ಯಂತ ಗಣನೀಯವಾದುದು. ಈ ನಿಟ್ಟಿನಲ್ಲಿ ಕೆಳಗಿನ ಅಂಶಗಳಿಗೆ ತಾವು ಗಮನಕೊಡಬೇಕು:

೧. ಶಾಲೆ ಅಥವಾ ಕಾಲೇಜುಗಳ ಶಿಕ್ಷಣ ಕ್ರಮದಲ್ಲಿ ಗಣಿತ, ವಿಜ್ಞಾನ, ವಾಣಿಜ್ಯಶಾಸ್ತ್ರ ಮತ್ತು ಸಾಹಿತ್ಯಗಳಂತಹ ಇತರ ವಿಷಯಗಳಿಗೆ ಹೋಲಿಸಿದಲ್ಲಿ, ಮೌಲ್ಯಾಧಾರಿತ ಶಿಕ್ಷಣವು ಕಡಮೆ ಪ್ರಾಮುಖ್ಯತೆ ಉಳ್ಳದ್ದೆಂಬ ಸಾಮಾನ್ಯ ತಪ್ಪು ಕಲ್ಪನೆಯು ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಷ್ಟೇ ಅಲ್ಲ, ಶಿಕ್ಷಕರಲ್ಲೂ ಇದೆ. ಈ ತಪ್ಪುಕಲ್ಪನೆಯನ್ನು ನಾವು ನಮ್ಮ ಮನಸ್ಸಿನಿಂದ ತೊಡೆದುಹಾಕಬೇಕು. ನೈತಿಕ ಶಿಕ್ಷಣವು ಪ್ರಧಾನ ವಿಷಯಗಳು (Core Subjects) ಎಂದು ಪರಿಗಣಿಸಲ್ಪಡುವ ವಿಷಯಗಳಷ್ಟೇ ಅತ್ಯಂತ ಮಹತ್ವ ಹೊಂದಿದೆ. ಪ್ರಧಾನ ವಿಷಯಗಳು ಒಂದು ವೃತ್ತಿಯನ್ನು ಕಟ್ಟಿಕೊಡಲು ಅಗತ್ಯವಾದ ಜ್ಞಾನವನ್ನು ಮಾತ್ರವೇ ವಿದ್ಯಾರ್ಥಿಗೆ ಒದಗಿಸಿಕೊಡುತ್ತದೆ. ಆದರೆ, ಮೌಲ್ಯಾಧಾರಿತ ಶಿಕ್ಷಣವು ವಿದ್ಯಾರ್ಥಿಗಳ ಸರ್ವಾಂಗೀಣ ನೈತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಒತ್ತು ಕೊಡುತ್ತದೆ. ಹೀಗಾಗಿ ಇದು ಕಡಮೆ ಮಹತ್ವದಲ್ಲ. ಆದ್ದರಿಂದ ಈ ವಿಷಯವನ್ನು ಬೋಧಿಸಲು ನಿಗದಿಪಡಿಸಲಾಗಿರುವ ಸಮಯವನ್ನು ಶಿಕ್ಷಕರು ತಮಗೆ ಹೊರೆ ಎಂದು ಭಾವಿಸಬಾರದು.

೨. ಇಂದಿನ ಪೀಳಿಗೆಯ ವಿದ್ಯಾರ್ಥಿಗಳ ಕಲಿಕೆಯ ಪ್ರಕ್ರಿಯೆಯನ್ನು ಹತ್ತಿರದಿಂದ ಅವಲೋಕಿಸಿದಾಗ, ಅವರು ಮೌಲ್ಯಗಳನ್ನು ಮತ್ತು ಅಮೂರ್ತ ತತ್ತ್ವಜಿಜ್ಞಾಸೆಗಳ ಒಣ ಉಪದೇಶವನ್ನು ಜುಗುಪ್ಸೆಯಿಂದ ನೋಡುವುದು ಕಂಡುಬಂದಿದೆ. ಅವರು, “ನಮಗೆ ಏತಕ್ಕಾಗಿ ತಾನೆ ನೈತಿಕತೆಯಿರಬೇಕು?” ಎಂದು ಕೇಳುವ ಪ್ರವೃತ್ತಿಯನ್ನು ಹೊಂದಿರುತ್ತಾರೆ. ಹೀಗಾಗಿ ಒಬ್ಬ ಶಿಕ್ಷಕನು ಈ ‘ಏಕೆ’ಗಳಿಗೆ ಸಮಂಜಸವಾಗಿ ಮನವೊಪ್ಪುವಂತೆ ಉತ್ತರಿಸಬೇಕೆಂದು ಅವರು ಬಯಸುತ್ತಾರೆ. ಇದಕ್ಕಾಗಿ ನೀವು ನೈತಿಕ ತತ್ತ್ವಗಳ ಬಗೆಗಿನ ನಿಮ್ಮ ಅನಿಸಿಕೆಗಳನ್ನು ಮತ್ತು ಅಭಿಪ್ರಾಯಗಳನ್ನು ವಿದ್ಯಾರ್ಥಿಗಳ ಭಾಷೆಯಲ್ಲಿ ಪರಿಣಾಮಕಾರಿಯಾಗಿ, ಶಾಲಾ ತರಗತಿಗಳಲ್ಲಿ ವ್ಯಕ್ತಪಡಿಸಲು ಸಜ್ಜಾಗಿರಬೇಕು.

೩. ವಿದ್ಯಾರ್ಥಿಗಳು ಅಮೂರ್ತಭಾವನೆಗಳನ್ನು ಇಷ್ಟಪಡುವುದಿಲ್ಲ ಎಂದು ಹಿಂದೆ ಹೇಳಿದೆ. ಆದರೆ ಅವರು ಕಥೆಗಳ ಕಡೆ ಖಂಡಿತ ಆಕರ್ಷಿತರಾಗುತ್ತಾರೆ. ಹೀಗಾಗಿ ನೈತಿಕ ಮೌಲ್ಯಗಳನ್ನು ಕಥನದ ರೂಪದಲ್ಲಿ ವಿದ್ಯಾರ್ಥಿಗಳಿಗೆ ಸಂವಹಿಸುವುದು ಸುಲಭವಷ್ಟೇ ಅಲ್ಲ, ಪರಿಣಾಮಕಾರಿ ಕೂಡ. ಆದರೆ ಕಥೆಗಳನ್ನು ಹೇಳುವಾಗ, ನೈತಿಕ ಮೌಲ್ಯಗಳ ಅಮೂರ್ತ ಭಾವನೆಗಳನ್ನು ನೇರವಾಗಿ ಒತ್ತಿಹೇಳದಂತೆ ಶಿಕ್ಷಕರು ಗಮನಹರಿಸಬೇಕು. ಆ ಉದಾತ್ತ ಮೌಲ್ಯಗಳು ತಾವೇತಾವಾಗಿ, ಕಥೆಗಳ ರೂಪದಲ್ಲಿ ವಿದ್ಯಾರ್ಥಿಗಳ ಮನಸ್ಸನ್ನು ಹೊಕ್ಕು, ಅವರ ಅಂತರಂಗವನ್ನು ಕಲಕುವಂತೆ, ಬೋಧನಾ ವಿಧಾನ ಇರಬೇಕು.

೪. ನೀವು ಬೋಧಿಸಬೇಕೆಂದಿರುವ ಮೌಲ್ಯಗಳನ್ನು ನಿರ್ದಿಷ್ಟಪಡಿಸಿಕೊಂಡು, ಅವುಗಳನ್ನು ಪರಿಣಾಮಕಾರಿಯಾಗಿ ತಿಳಿಹೇಳುವ ಕಥೆಗಳು ಮತ್ತು ಪ್ರಸಂಗಗಳ ಸಂಗ್ರಹವನ್ನು ಮಾಡಿಕೊಳ್ಳಿ. ಇಂತಹ ಕೆಲವು ಮೌಲ್ಯಗಳು ಹೀಗಿವೆ: **ನಿಷ್ಠೆ, ಕಠಿಣ ಪರಿಶ್ರಮ, ಪರಿಸರಪ್ರೇಮ, ವಿಧೇಯತೆ, ಸ್ವಾವಲಂಬನೆ, ಅಹಿಂಸೆ, ಧೈರ್ಯ, ವೈಚಾರಿಕತೆ, ಮನಸ್ಸಿನ ಏಕಾಗ್ರತೆ, ಹೃದಯವಂತಿಕೆ, ನಾಗರಿಕ ಪ್ರಜ್ಞೆ ಮತ್ತು ರಾಷ್ಟ್ರೀಯ ಪ್ರಜ್ಞೆ ಹಾಗೂ ಅಂತರ-ಧರ್ಮ ಸೌಹಾರ್ದತೆ.**

೫. ಮೌಲ್ಯ ಶಿಕ್ಷಣದ ಅಂಗವಾದ ನೀತಿಕಥೆಗಳನ್ನು ಹೇಳುವಾಗ, ಕಥೆಯ ಮೂಲ ಉದ್ದೇಶಕ್ಕೆ ಪೂರಕವಾದ ಅಂಶಗಳನ್ನು ಗುರುತು ಮಾಡಿಕೊಂಡು, ಅವುಗಳನ್ನು ಮತ್ತೆ ಮತ್ತೆ ಹೇಳಬೇಕು. ಹಾಗೆಯೇ ಮಕ್ಕಳ ಕಲ್ಪನಾಶಕ್ತಿ ಮತ್ತು ಸೃಜನಾತ್ಮಕಶಕ್ತಿಗಳಿಗೆ ಇಂಬು ಕೊಡುವಂತೆ, ಕಥನಶೈಲಿ ರಂಜನೀಯವೂ, ಹೃದಯಂಗಮವೂ ಆಗಿರುವಂತೆ ನೋಡಿಕೊಳ್ಳಬೇಕು. ಇದರಿಂದ ನಾವು ಮಕ್ಕಳ ಮನಸ್ಸನ್ನು ಸುಲಭವಾಗಿ ಆಕರ್ಷಿಸಿ, ಕತೆಯ ವಿವಿಧ ವಿವರಗಳ ಕಡೆ ಗಮನ ಕೊಡುವಂತೆ ಮಾಡಬಹುದು.

೬. ಕಥೆಗಳಲ್ಲಿ ಪ್ರತಿಪಾದಿಸಿರುವ ಮೌಲ್ಯಗಳನ್ನು ಎತ್ತಿತೋರಿಸಲು ಶಾಲಾಜೀವನದಲ್ಲಿನ ದಿನನಿತ್ಯದ ಘಟನೆಗಳು ಮತ್ತು ಬೆಳವಣಿಗೆಗಳನ್ನು ಉಪಯೋಗಿಸಿಕೊಳ್ಳಿ. ನಿರೂಪಣೆಯಲ್ಲಿ ಮೌಲ್ಯಗಳನ್ನು ಪ್ರತಿಪಾದಿಸಿರುವ ಕಡೆಗಳಲ್ಲೆಲ್ಲಾ ಸ್ವಲ್ಪ ವಿರಾಮ ನೀಡಿ, ಮೊದಲು ಕಥೆಯ ಪಾತ್ರಕ್ಕೆ ಸಂಬಂಧಿಸಿದಂತೆ, ಅನಂತರ ಅವರ ಜೀವನಕ್ಕೆ ಸಂಬಂಧಿಸಿದ ಚರ್ಚೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳುವಂತೆ ಮಾಡಿ.

೭. ನೀತಿಶಿಕ್ಷಣದ ಮೌಲ್ಯಮಾಪನ ಅಥವಾ ಪರೀಕ್ಷೆಯ ವಿಧಾನಗಳಲ್ಲಿ ವಿದ್ಯಾರ್ಥಿಗಳ ಸ್ವಯಂಪ್ರೇರಿತ ನಿರೂಪಣೆಗಳು ಮತ್ತು ಅವರ ಸ್ವತಂತ್ರ ಆಲೋಚನಾ ಶಕ್ತಿಗೆ ಮಹತ್ವ ಕೊಡಬೇಕೇ ಹೊರತು, ಪಠ್ಯವನ್ನು ಹಾಗೇ ಭಟ್ಟಿ ಇಳಿಸುವ ಸಾಂಪ್ರದಾಯಿಕ ವಿಧಾನವನ್ನು ಅನುಸರಿಸಬಾರದು.

# ಸರ್ವಜ್ಞಮೂರ್ತಿ ವೇಮನ

ಡಾ. ರಾಜಶೇಖರ ಮಲ್ಲನಗೌಡ ಪಾಟೀಲ

**ವೇಮನ ತೆಲುಗು ಭಾಷೆಯ ದಾರ್ಶನಿಕ ಕವಿ. ಕರ್ನಾಟಕ ದಲ್ಲಿ ಸರ್ವಜ್ಞ ನಂತೆಯೇ ಇವನ ಹೆಸರು ಆಂಧ್ರ ಪ್ರದೇಶದಲ್ಲಿ ಹೆಸರಾಗಿದೆ. ಈ ಮಹಾನ್ ಯೋಗಿಯ ಜೀವನ ಮತ್ತು ಕಾವ್ಯದ ಸರಳ ಪರಿಚಯ ವನ್ನು ನಾವಿಲ್ಲಿ ಕಾಣುತ್ತೇವೆ. ಇದರ ಲೇಖಕರು ಬಿಜಾಪುರ ಜಿಲ್ಲೆಯ ಸಿಂಧಗಿ ಯಲ್ಲಿರುವ ಜಿ.ಪಿ. ಪೋರವಾಲ ಮಹಾ ವಿದ್ಯಾಲಯ ದಲ್ಲಿ ಸಹ ಪ್ರಾಧ್ಯಾಪಕ ರಾಗಿ ಕಾರ್ಯ ನಿರ್ವಹಿಸು ತ್ತಿದ್ದಾರೆ.**

**ವೇ**ಮನ ಅಪ್ರತಿಮ ಕವಿ. ಈ ದೇಶದ ಸಂಸ್ಕೃತಿಯ ಸಾರವನ್ನು ಆಳವಾದ ಅನುಭವದಿಂದ ಅರಗಿಸಿಕೊಂಡು ಹೃದಯದ ತುಡಿತ ದಿಂದ ಸರಳವಾದ ಭಾಷೆಯಲ್ಲಿ ಹಾಡಿದ ಕವಿ. ಕರ್ನಾಟಕದಲ್ಲಿ ಸರ್ವಜ್ಞನಿಗಿರುವ ಸ್ಥಾನವೇ ಆಂಧ್ರಪ್ರದೇಶದಲ್ಲಿ ವೇಮನನಿಗಿದೆ. ವೇಮನ ತೆಲುಗು ಭಾಷೆಯಲ್ಲಿ ಸಾವಿರಾರು ಪದ್ಯಗಳನ್ನು ರಚಿಸಿದ್ದಾನೆ. ಲೋಕಜ್ಞಾನ, ಜೀವನ ವ್ಯವಹಾರಗಳಲ್ಲಿ ಹೇಗೆ ನಡೆಯ ಬೇಕೆಂಬುದನ್ನು ಸರ್ವಜ್ಞನು ಹೇಗೆ ಬೋಧಿಸಿರುವನೋ ಅಂತೆಯೇ ವೇಮನನೂ ಬೋಧಿಸಿದ್ದಾನೆ. ಈತನ ಪದ್ಯಗಳಲ್ಲಿ ಸಾಮಾಜಿಕ ಮೌಢ್ಯ, ಕಂದಾಚಾರ, ಗೊಡ್ಡು ಸಂಪ್ರದಾಯ, ಜಾತೀಯತೆ ಹಾಗೂ ಇತರ ಸಾಮಾಜಿಕ ಅನಿಷ್ಟಗಳನ್ನು ತೊಡೆದುಹಾಕುವ ಕಳಕಳಿಯನ್ನು ಕಾಣಬಹುದಾಗಿದೆ.



ವೇಮನನು ೧೫ನೇ ಶತಮಾನದಲ್ಲಿ ಜೀವಿಸಿದ್ದನೆಂದು ಕಂಡು ಬರುತ್ತದೆ. ಇವನದು ಆಂಧ್ರಪ್ರದೇಶದ ಕೃಷ್ಣಾ ಜಿಲ್ಲೆಯ ಕೊಂಡವೀಡು. ಈತನು ಕ್ರಿ.ಶ. ೧೪೧೨ ಜನವರಿ ೧೯ ರಂದು ಜನಿಸಿದನು. ಇವನು ರೆಡ್ಡಿ ಜನಾಂಗದ ರಾಜಮನೆತನಕ್ಕೆ ಸೇರಿದವನಾಗಿದ್ದನು. ಪೋಲಯ್ಯ ವೇಮಾರೆಡ್ಡಿ ಎಂಬುವವನು ಆ ಮನೆತನದ ಮೂಲಪುರುಷ. ರೆಡ್ಡಿ ಜನಾಂಗದ ರಾಜವಂಶದವರು ಆಂಧ್ರದ ಕೃಷ್ಣಾ ಜಿಲ್ಲೆಯ ಕೊಂಡವೀಡನ್ನು ರಾಜಧಾನಿಯಾಗಿಸಿಕೊಂಡು ಆಳುತ್ತಿದ್ದರು. ಇವರು ಮುಂದೆ ಕೃಷ್ಣಾ ಮತ್ತು ಗೋದಾವರಿ ಜಿಲ್ಲೆಗಳನ್ನು ಆಕ್ರಮಿಸಿ ಕೊಂಡು ಆಳಿದರೆಂದು ತಿಳಿದುಬರುತ್ತದೆ. ೧೫ನೇ ಶತಮಾನದಲ್ಲಿ ಈ ವಂಶದ ಕುಮಾರಗಿರಿ ವೇಮಾರೆಡ್ಡಿ ಎಂಬುವವನು ಸುಮಾರು ೧೪ ವರ್ಷಗಳ ಕಾಲ ರಾಜ್ಯಭಾರ ಮಾಡಿದನು. ಈತನಿಗೆ ವೆಂಕಾರೆಡ್ಡಿ ಮತ್ತು ರಾಚವೇಮಾರೆಡ್ಡಿ ಎಂಬ ಇಬ್ಬರು ಮಕ್ಕಳಿದ್ದರು. ವೆಂಕಾರೆಡ್ಡಿಗೆ ಆನವೇಮಾರೆಡ್ಡಿ ಎಂತಲೂ, ಎರಡನೆಯವನಾದ ರಾಚವೇಮಾರೆಡ್ಡಿಗೆ ವೇಮಾರೆಡ್ಡಿ ಎಂದೂ ಕರೆಯುತ್ತಿದ್ದರು.

ಮುಂದೆ ವೇಮಾರೆಡ್ಡಿಯೆ ವೇಮನನಾಗಿ ಖ್ಯಾತಿ ಪಡೆಯುತ್ತಾನೆ. ವೇಮನನ ಸಹೋದರ ಆನವೇಮಾರೆಡ್ಡಿ ರಾಜ್ಯಭಾರ ವಹಿಸಿ ಕೊಂಡಾಗ ವೇಮನನಿಗಿನ್ನೂ ಚಿಕ್ಕ ವಯಸ್ಸು. ಅತ್ತಿಗೆಯ ಆರೈಕೆ ಯಲ್ಲಿ ಅವನು ಬೆಳೆದನು. ಅತ್ತಿಗೆ ನರಸಾಂಬೆಯು ವೇಮನನನ್ನು ತನ್ನ ಸ್ವಂತ ಮಗನಂತೆ ಜೋಪಾನ ಮಾಡಿದಳು. ತನ್ನೆಲ್ಲ ಪ್ರೀತಿ, ವಾತ್ಸಲ್ಯವನ್ನು ಅವನಿಗೆ ಧಾರೆ ಎರೆದಳು. ವೇಮನನು ಅತ್ತಿಗೆಯ ಮಾತನ್ನು ಎಂದಿಗೂ ಮೀರುತ್ತಿರಲಿಲ್ಲ. ಪ್ರಾಯಕ್ಕೆ ಬಂದನಂತರ ವೇಮನನು ಕೆಟ್ಟ ಸಹವಾಸದಿಂದ ದುರ್ಗುಣಗಳನ್ನು ರೂಢಿಸಿಕೊಂಡನು. ಅವನು ಯಾವಾಗಲೂ ಒಬ್ಬ ವೇಶ್ಯೆಯ ಸಹವಾಸದಲ್ಲಿ ಕಾಲಕಳೆಯಹತ್ತಿದನು. ಆಕೆ ಕೇಳಿದುದೆಲ್ಲವನ್ನೂ ತಂದುಕೊಡುತ್ತಿದ್ದನು. ಅಣ್ಣ-ಅತ್ತಿಗೆಯರು ಎಷ್ಟು ಬುದ್ಧಿವಾದ ಹೇಳಿದರೂ ಕೇಳಲಿಲ್ಲ. ಒಂದು ದಿನ ಆ ವೇಶ್ಯೆಯು ವೇಮನನಿಂದ ಭಾಷೆಯನ್ನು ಪಡೆದುಕೊಂಡು, ಅತ್ತಿಗೆಯ ಮೂಗುತಿಯನ್ನು ತಂದುಕೊಡಲು ಹೇಳಿದಳು. ವೇಶ್ಯೆಯ ಈ ಬೇಡಿಕೆಯಿಂದ ವೇಮನನು ನೊಂದುಕೊಂಡು ಯಾರ

ಹತ್ತಿರವೂ ಮಾತನಾಡದೆ, ಅರಮನೆಯಲ್ಲಿ ಇರಹತ್ತಿದನು. ಇವನು ಹೀಗಿರುವುದನ್ನು ಗಮನಿಸಿದ ನರಸಾಂಬೆಯು ನಿಜಸ್ಥಿತಿ ಯೇನೆಂಬುದನ್ನು ವಿಚಾರಿಸಿದಳು. ವೇಮನನು ಅತ್ತಿಗೆಗೆ ನಿಜಸ್ಥಿತಿ ಯನ್ನು ತಿಳಿಸಿದಾಗ, ಅವಳು ಒಂದು ಷರತ್ತು ವಿಧಿಸಿ, ತನ್ನ ಮೂಗುತಿಯನ್ನು ಕೊಡಲು ಒಪ್ಪಿಕೊಂಡಳು. ಮೂಗುತಿಯನ್ನು ವೇಶ್ಯೆಗೆ ಕೊಡುವ ಮೊದಲು, ಅವಳನ್ನು ಪೂರ್ಣ ನಗ್ನಳನ್ನಾಗಿಸಿ ಅವಳ ದೇಹದ ಪ್ರತಿಯೊಂದು ಅಂಗವನ್ನೂ ಪರೀಕ್ಷಿಸಿ ನೋಡಿ ಕೊಡಬೇಕು ಎನ್ನುವುದೇ ಆ ಷರತ್ತು. ವೇಮನನು ತನ್ನ ಅತ್ತಿಗೆ ಹೇಳಿದಂತೆ ಮಾಡಿದನು. ಆಗ ಅವನಿಗೆ ಸ್ತ್ರೀಯರ ವಿಷಯದಲ್ಲಿ ಮತ್ತು ಒಟ್ಟಾರೆ ಲೌಕಿಕ ಜೀವನದಲ್ಲಿಯೇ ಜುಗುಪ್ಸೆ ಮೂಡಿತು, ಅರಮನೆಯ ಸುಖಭೋಗಗಳೆಲ್ಲ ನಿಸ್ಸಾರ ವಾದುವು. ಮುಂದೆ ಅವನು ತನ್ನ ಅಣ್ಣನಿಂದ ಒಂದು ತುಂಡು ಜಮೀನನ್ನು ಕೇಳಿ ಪಡೆದುಕೊಂಡು, 'ಕಾಯಕ ಯೋಗಿ' ಯಾಗಿ ಬಾಳತೊಡಗಿದನು.



ವೇಮನನು ಸಾವಿರಾರು ಪದ್ಯಗಳನ್ನು ರಚಿಸಿದ್ದರೂ, ಅವುಗಳಲ್ಲಿ ಕೆಲವೇ ಕೆಲವು ಪದ್ಯಗಳು ಪ್ರಕಟಗೊಂಡಿವೆ. ಅವನ ಪದ್ಯಗಳಲ್ಲಿ ಪರಬ್ರಹ್ಮ ತತ್ತ್ವ, ನಿರ್ಮೋಹತ್ವ, ಸತ್ಯನಿಷ್ಠೆ, ನಿಶ್ಚಯಜ್ಞಾನ ಮುಂತಾದ ತಾತ್ತ್ವಿಕ ವಿಚಾರಗಳನ್ನೂ ಕಾಣ ಬಹುದು. ಅದಲ್ಲದೆ ಸಾಮಾಜಿಕ ಅನಿಷ್ಟಗಳನ್ನು ತೊಡೆದುಹಾಕುವ ವಿಚಾರಗಳನ್ನೂ ಕಾಣ ಬಹುದು. ಮಾನವನು ಉತ್ತಮ ಬದುಕನ್ನು ಹೇಗೆ ರೂಪಿಸಿಕೊಳ್ಳಬೇಕೆಂಬುದನ್ನೂ ವೇಮನನು ಮಾರ್ಮಿಕವಾಗಿ ಬೋಧಿಸಿದ್ದಾನೆ. ತನ್ನ ಪ್ರತಿಯೊಂದು ಪದ್ಯದ ಕೊನೆಯಲ್ಲಿಯೂ **'ವಿಶ್ವತೋಭಿರಾಮ ಕೇಳೋ ವೇಮಾ'** ಎಂಬುದಾಗಿ ಸೇರಿಸಿದ್ದಾನೆ. ಮೇಲ್ನೋಟಕ್ಕೆ ಈ ಪದ್ಯಗಳು ತನಗೆ ತಾನೇ ಹೇಳಿಕೊಂಡಂತೆ ಕಂಡುಬಂದರೂ ಇತರರಿಗೆ ಜೀವನ ಮಾರ್ಗದರ್ಶನ ನೀಡುವ ವಚನಗಳಂತಿವೆ.

ಅಪ್ರತಿಮ ಶಿವಭಕ್ತನಾದ ಇವನು ಅಭಿರಾಮಯ್ಯನೆಂಬುವನಿಂದ ಶಿವದೀಕ್ಷೆಯನ್ನು ಪಡೆದು ಕಾಯಕಯೋಗಿಯಂತೆ ಜೀವಿಸಿದನು. ಇವನು ತನ್ನೆಲ್ಲ ಪದ್ಯಗಳನ್ನೂ ತನ್ನ ಗುರುವಿಗೇ ಸಮರ್ಪಿಸಿದ್ದಾನೆ.

ವೇಮನನು ಇತರ ಯೋಗಿಗಳಂತೆ ಯೋಗಾಭ್ಯಾಸನಿರತನಾಗಿ ಏಕಾಂತವಾಸವನ್ನು ಬಯಸಲಿಲ್ಲ. ಜನರಿಗೆ ನೀತಿ, ಧರ್ಮ, ಸಂಸಾರದ ಗತಿ – ಇನ್ನು ಮುಂತಾದ ವಿಚಾರಗಳನ್ನು ಬೋಧಿಸುತ್ತಾ ಕಾಲಕಳೆದನು. ತಾನು ಬೋಧಿಸುವ ತತ್ತ್ವಗಳನ್ನು ಬೇರೆಯವರನ್ನು ಕುರಿತಂತೆ ಮಾತ್ರ ಹೇಳಿದ್ದಾನೆ ಎಂದು ಜನರು ತಿಳಿಯಬಾರದೆಂದು, ಈ ಪದ್ಯಗಳಲ್ಲಿ ತನ್ನ ದುರ್ಗುಣಗಳನ್ನು ದೂರ ಮಾಡಿಕೊಳ್ಳಲು ತನಗೆ ತಾನೇ ಉಪದೇಶ ಮಾಡಿಕೊಂಡಂತೆ ಹೇಳಿಕೊಂಡಿದ್ದಾನೆ.

ವೇಮನ ಕೆಳಗಿನ ಪದ್ಯಗಳಲ್ಲಿ ಜಗತ್ತು ಈಶ್ವರಮಯವೆಂದು ಹೇಳುತ್ತ, ದೇವರ ಸ್ವರೂಪವನ್ನು ಕುರಿತು ಹೀಗೆ ಹೇಳುತ್ತಾನೆ:

**ಮಣ್ಣು ಪಾತ್ರೆಯಂಥಾ ಮಾಯಾ ಶರೀರವು**
**ಸಾವುದಿಂದು ನಾಳೆ ಸಾಯದಾತ್ಮ ।**
**ಘಟಗಳೆಷ್ಟಾದರುಂ ಗಗನವು ತಾನೊಂದೆ ವೇಮಾ ॥**

**ಯಾವ ಜಾತಿಯವನೋ ತಿಳಿಯದು ಮೊದಲೊಳು**
**ನಿಜ ಬಾಳಿಗೇಕೆ ನಿಯಮವಿನ್ನು ।**
**ತಿಳಿವುದೀ ಜಗತ್ತು ಈಶ್ವರಮಯವೆಂದು ವೇಮಾ ॥**

ಇಂದ್ರಿಯಗಳಿಗೆ ವಶನಾಗದೆ ಏಕಾಗ್ರಚಿತ್ತದಿಂದ ಶಿವನಲ್ಲಿ ನಿಷ್ಠೆಯಿರಿಸಿ ಮನಸ್ಸನ್ನು ನಿಲ್ಲಿಸಿದರೆ, ಖಂಡಿತವಾಗಿಯೂ ಮುಕ್ತಿ ಸಿಗುವುದೆಂದು ವೇಮನ ಹೇಳುತ್ತಾನೆ. ಮಹಾಭಕ್ತನಾದವನು ಡಂಭಾಚಾರದ ಭಕ್ತಿಯನ್ನು ಪ್ರಕಟಿಸದೆ, ಮನಸ್ಸನ್ನು ನಿಯಂತ್ರಿಸ ಬೇಕೆಂದು ಹೀಗೆ ಅಭಿಪ್ರಾಯಪಟ್ಟಿದ್ದಾನೆ:

**ಮನವೇ ಮಾಯಾಮೃಗವೀ**
**ಮನವೆಲ್ಲಿಯೂ ಚಲಿಸದಂತೆ ಬಿಗಿ ಹಿಡಿಯುತ್ತ ।**
**ಮನದೊಳ್ ಗರ್ವದ ಮೃಗವಂ**
**ಮನದಲ್ಲಿಯೇ ಕೊಂದಡಲ್ಲಿ ಮುಕ್ತಿಯು ಸಿದ್ಧಂ ವೇಮಾ ॥**

**ಭಸ್ಮ ದೇಹಕ್ಕೆಲ್ಲ ಬಳಿದಡೇನಾಯ್ತು**
**ನಿಷ್ಠೆ ಶಿವನ ಮೇಲೆ ನಿಲಿಸಬೇಕು ।**
**ಬೂದಿಯಲ್ಲಿ ಕತ್ತೆ ಒದ್ದಾಡದೆ ವೇಮಾ ॥**

ಹಾಗೆಯೇ ಬ್ರಹ್ಮಜ್ಞಾನವನ್ನು ಕುರಿತು ಹಲವು ಪದ್ಯಗಳನ್ನು ವೇಮನನು ರಚಿಸಿರುವನು. ಅವುಗಳಲ್ಲಿ ಕೆಲವು ಈ ರೀತಿಯಾಗಿವೆ:

**ನವರಂಧ್ರಯುಕ್ತ ಚೀಲಕೆ**
**ನವಕುಂದಣ ಭೂಷಣಂಗಳಲಂಕಾರವೇಕೋ ।**
**ತವೆ ನೋಡಲಸ್ಥಿರ ತನು**
**ಸುವಿವೇಕದ ಬೊಮ್ಮನಾನೆನುತ ತಿಳಿ ವೇಮಾ ॥**

**ವಿಜ್ಞಾನ ದೃಷ್ಟಿಯಿಂ ವಿಶ್ವವು ನನಗಲ್ಲಿ ಪರಮಾಣುವಾಗಿ**
**ತೋರುವುದು ನಿಜವು ।**
**ಸುಜ್ಞಾನ ದೃಷ್ಟಿಯಲಿ ಸರ್ವವನು ನಿಜವೆಂದು**
**ಕಾಣುತಲಿರ್ಪವು ಕ್ರಮದೊಳೈದೆ ವೇಮಾ ॥**